**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ-15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1-5, 7 ಮತ್ತು 8 ಪ್ರತಿವಾದಿಗಳ ಪರ ಶ್ರೀ . ಎಸ್.ಆರ್ .ರವರಿಂದಃ**

ದಾವಾ ಸ್ವತ್ತಿನ ಸ.ನಂ.53/5 ಆಗಿರುತ್ತದೆ. ಅದರ ಒಟ್ಟು ವಿಸ್ತೀರ್ಣ 1 ಎಕರೆ 21 ಗುಂಟೆ ಆಗಿರುತ್ತದೆ. ದಾವಾ ಸ್ವತ್ತು ಮೂಲತಃ ತಿಮ್ಮಯ್ಯನವರಿಗೆ ಸೇರಿದ್ದಾಗಿರುತ್ತದೆ. ದಾವಾ ಸ್ವತ್ತನ್ನು ತಿಮ್ಮಯ್ಯನವರು ಖರೀದಿಸಿದ ಸ್ವತ್ತಾಗಿರುತ್ತದೆ. ತಿಮ್ಮಯ್ಯನವರು ಯಾವಾಗ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಿಮ್ಮಯ್ಯ ನವರು ದಾವಾ ಸ್ವತ್ತನ್ನು ಖರೀದಿಸಿರುವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ ಏಕೆಂದರೆ ಸದರಿ ಸ್ವತ್ತನ್ನು ಅಜ್ಜಿಯವರ ಕಾಲದಲ್ಲಿ ನಮ್ಮ ಅಜ್ಜಿಯವರು ಖರೀದಿಸಿರುವ ಸ್ವತ್ತಾಗಿರುವುದರಿಂದ ನನಗೆ ಗೊತ್ತಿಲ್ಲ. ವಸೂರಯ್ಯನವರ ಮಗ ತಿಮ್ಮಯ್ಯ ನವರು ದಾವಾ ಸ್ವತ್ತನ್ನು ದಿಃ 19.01.1942 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ತಿಮ್ಮಯ್ಯನವರ ಮಗ ವಸೂರಯ್ಯ ಎಂದು ಮಗ ಇದ್ದರು ಎಂದರೆ ಸರಿ. ವಸೂರಯ್ಯನಿಗೆ ಒಟ್ಟು ಮೂರು ಜನ ಮಕ್ಕಳು ಅವರುಗಳೆಂದರೆ ವೆಂಕಟೇಶ್, ಸಿದ್ದಣ್ಣ, ತಿಮ್ಮಯ್ಯ ಆಗಿರುತ್ತಾರೆ. ದಿಃ 04.05.1953 ರಲ್ಲಿ ವಸೂರಯ್ಯನವರು ಬೆಟ್ಟೇಗೌಡರ ಮಕ್ಕಳಾದ ಹನುಮಂತಯ್ಯ ನವರಿಗೆ ದಾವಾ ಸ್ವತ್ತನ್ನು ನೋಂದಾಯಿತು ಬೋಗ್ಯ ಪತ್ರವನ್ನು ಮಾಡಿಸಿಕೊಂಡು ಬೋಗ್ಯಕೆ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಬೋಗ್ಯ ಪತ್ರದ ಆಧಾರದ ಮೇಲೆ ಹನುಮಂತಯ್ಯನವರ ಹೆಸರಿನಲ್ಲಿ ಖಾತೆ ಪಹಣಿ ಬರುತ್ತಿತ್ತು ಎಂದರೆ ಸರಿ. ಸದರಿ ಬೋಗ್ಯ ಪತ್ರದ ಆಧಾರದ ಮೇಲೆ ಬೋಗ್ಯ ಪತ್ರವನ್ನು ಸದರಿ ಹನುಮಂತಯ್ಯನವರು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ವಸೂರಯ್ಯನ ಮರಣಾನಂತರ ಅವರ ಮೂರು ಜನ ಮಕ್ಕಳು ದಾವಾ ಸ್ವತ್ತನ್ನು ಸ್ವಾಧೀನಾನುಭವವನ್ನು ಹೊಂದಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು

ಇವರೊಂದಿಗೆ ಯಲ್ಲಯ್ಯ ಎಂಬುವವರು ಸ್ವಾಧೀನಾನುಭವದಲ್ಲಿದ್ದರು ಎಂದು ನುಡಿಯುತ್ತಾರೆ. ಸದರಿ ಯಲ್ಲಯ್ಯ ಎಂದರೆ ತಿಮ್ಮಯ್ಯನವರ ಎರಡನೇ ಮಗನಾಗಿರುತ್ತಾರೆ. ಸದರಿ ತಿಮ್ಮಯ್ಯನವರಿಗೆ ವಸೂರಯ್ಯ ಮತ್ತು ಯಲ್ಲಯ್ಯ ಎಂಬ ಇಬ್ಬರು ಮಕ್ಕಳು ಇದ್ದರು. ಸದರಿ ವಸೂರಯ್ಯನವರು ದಾವಾ ಸ್ವತ್ತನ್ನು ಹನುಮಂತೇಗೌಡರಿಗೆ 1953 ರಲ್ಲಿ ಬೋಗ್ಯ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸ.ನಂ. 53/5 ರಲ್ಲಿ ಇರುವ 1 ಎಕರೆ 21 ಗುಂಟೆ ಪೈಕಿಯಲ್ಲಿ 31 ಗುಂಟೆಗೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ 31 ಗುಂಟೆ ಮೂಲತಃ ವಸೂರಯ್ಯನಿಗೆ ಸೇರಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಾನ 31 ಗುಂಟೆಯಲ್ಲಿ ವಸೂರಯ್ಯ ನವರು ನಿರ್ಮಿಸಿರುವ ಮೂರು ದೇವಸ್ಥಾನಗಳು ಅಂದರೆ ವೆಂಕಟೇಶ್ವರ ದೇವಸ್ಥಾನ, ಯಲ್ಲಮ್ಮ ದೇವರ ದೇವಸ್ಥಾನ ಮತ್ತು ಸಿದ್ದೇಶ್ವರ ದೇವಸ್ಥಾನ ಇರುತ್ತವೆ. ಸದರಿ ದೇವಸ್ಥಾನಗಳನ್ನು 1 ನೇ ಪ್ರತಿವಾದಿಯು ಪೂಜೆ ಪುನಸ್ಕಾರ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೇವಸ್ಥಾನಗಳಿಗೆ ಸಾಕಷ್ಟು ಜನ ಭಕ್ತಾದಿಗಳು ಬರುತ್ತಿರುತ್ತಾರೆಂದರೆ ಸರಿಯಲ್ಲ. ಸದರಿ ದೇವಸ್ಥಾನಗಳಿಗೆ ನಮ್ಮ ಊರಾದ ವಡ್ಡರಟ್ಟಿಯಿಂದ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕುಷ್ಕಿ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ನಾನು ತರಕಾರಿ ಬೆಳಯುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳ ಮನೆಗಳು ಸಹ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸ.ನಂ. 53/5 ರಲ್ಲಿ ಇರುವ ಒಟ್ಟು 1 ಎಕರೆ 21 ಗುಂಟೆಯಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ಸ್ವತ್ತು ಸ.ನಂ. 53/5 ರಲ್ಲಿ ಇರುವ ಒಟ್ಟು 1 ಎಕರೆ 21 ಗುಂಟೆಯ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಹೊನ್ನಯ್ಯ ಮತ್ತು ಚಿಕ್ಕ ನರಸಯ್ಯ ನವರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ವಡ್ಡರಟ್ಟಿ ಗ್ರಾಮಠಾಣಾ ಎಂದರೆ ಸಾಕ್ಷಿಯು ನಮ್ಮ ಪಿತ್ರಾರ್ಜಿತ ಸ್ವತ್ತು ಇದ್ದು ನಂತರ ಗ್ರಾಮಾಠಾಣಾ ಇರುತ್ತದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ಬೆಟ್ಟ ಸ್ವಾಮಿ ಗೌಡರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಪಿತ್ರಾರ್ಜಿತ ಸ್ವತ್ತು ಬರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ತುಮಕೂರಿನ ಗಡಿ ಎಂದರೆ ಸರಿ. ನಾನು ಕೇಳಿದ ಚಕ್ಕುಬಂದಿಯಲ್ಲಿ ಪ್ರತಿವಾದಿಯರು ಮನೆಗಳನ್ನು ನಿರ್ಮಿಸಿಕೊಂಡು ವಾಸವಿದ್ದು

ಅದರಲ್ಲಿ ದೇವಸ್ಥಾನಗಳು ಸಹ ಬರುತ್ತದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯೂ ದಾವಾ ಸ್ವತ್ತನ್ನು ಹನುಮಂತೇಗೌಡ ರವರಿಗೆ ಆಗಿದ್ದ ಬೋಗ್ಯವನ್ನು ದಿಃ 02.07.2011 ರಂದು ಖುಲಾಸೆ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಎ.ಸಿ ನ್ಯಾಯಾಲಯದಲ್ಲಿ ಬೋಗ್ಯ ಖುಲಾಸೆ ಮಾಡಿಸಿಕೊಂಡ ನಂತರ ದಾವಾ ಸ್ವತ್ತಿನ ಖಾತೆ ಪಹಣಿಯು ಸಹ 8 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿರುತ್ತದೆ ಎಂದರೆ ಸರಿಯಲ್ಲ. ದಿಃ 15.11.1966 ರಲ್ಲಿ ಯಲ್ಲಯ್ಯನವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಯಲ್ಲಯ್ಯನವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವಾಗ ದಾವಾ ಸ್ವತ್ತಿನ ಖಾತೆ ಪಹಣಿ ಅವರ ಹೆಸರಿನಲ್ಲಿ ಇರಲಿಲ್ಲ ಎಂದರ ಸರಿ. ದಿಃ 15.11.1966 ರ ಕ್ರಯ ಪತ್ರವಾದ ನಿಪಿ.16 ಅನ್ನು ನನ್ನ ಅಜ್ಜಿ ಬೋರಮ್ಮ ನವರು ರಾಜಕೀಯದ ಪ್ರಭಾವವನ್ನು ಬೀರಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ದಿಃ 15.11.1966 ರ ಮೂಲ ಕ್ರಯ ಪತ್ರ ಏನಾಯಿತು ಎಂದು ಬರೆಸಿರುತ್ತೇನೆ ಇಲ್ಲವೋ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶವನ್ನು ನಾನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ನನ್ನ ಪ್ರಮಾಣ ಪತ್ರದಲ್ಲಿ ದಿಃ 15.11.1966 ರ ಮೂಲ ಕ್ರಯ ಪತ್ರ ಏನಾಯಿತು ಎಂದು ಬರೆಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. 1996 ರಲ್ಲಿ ನನ್ನ ಅಜ್ಜಿ ಬೋರಮ್ಮ ನವರಿಗೆ ಖಾತೆ ಮತ್ತು ಪಹಣಿ ಬಂದಿರುತ್ತದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನನ್ನ ಅಜ್ಜಿ ಬೋರಮ್ಮನವರು ಸ್ವಾಧೀನಾನುಭವದಲ್ಲಿ ಇದ್ದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ನನ್ನ ಅಜ್ಜಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಆದರೆ ಬೋರಮ್ಮನವರ ಗಂಡನಾದ ಅಂದರೆ ನನ್ನ ತಾತನಾದ ಹೊನ್ನಯ್ಯ ಯಾನೆ ಹೊನ್ನೇಗೌಡ ರವರು ಸ್ವಾಧೀನ ಇರುವ ಬಗ್ಗೆ ದಾಖಲೆ ಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಾತ ಹೊನ್ನಯ್ಯ ಎಂದು ತೋರಿಸಲು ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಮ್ಮ ಊರಿನಲ್ಲಿ ನಮ್ಮ ತಾತನೊಬ್ಬನೇ ಹೊನ್ನಯ್ಯ ಎಂದು ಇರುತ್ತಾರೆ ಎಂದರೆ ಸರಿ.

ನಮ್ಮ ಊರಿನಲ್ಲಿ ಹೊನ್ನಯ್ಯ ಎಂದು ಹಲವಾರು ಜನ ಇದ್ದು ಅದನ್ನು ದುರುಪಯೋಗಪಡಿಸಿಕೊಂಡು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಲ್ಲಿ ನಾವು ಸ್ವಾಧೀನಾನುಭವದಲ್ಲಿರುತ್ತೇನೆ ಎಂದು ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿದ್ದು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ಇದೇ ನ್ಯಾಯಾಲಯದಲ್ಲಿ ಮದ್ಯಂತರ ಅರ್ಜಿಯನ್ನು ಸಲ್ಲಿಸಿ ನಮಗೆ ತೊಂದರೆ ನೀಡದಂತೆ ಪ್ರತಿವಾದಿಗಳ ವಿರುದ್ದ ಪರಿಹಾರ ವನ್ನು ಕೇಳಿದ್ದರು ಎಂದರೆ ಸರಿ. ಸದರಿ ಮದ್ಯಂತರ ಅರ್ಜಿಯನ್ನು ನಾವು ಸ್ವಾಧೀನಾನುಭವದಲ್ಲಿ ಇರುವುದಿಲ್ಲವೆಂದು ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ. ಹೊನ್ನಯ್ಯ ಎಂದರೆ ಬೇರೆ ವ್ಯಕ್ತಿಯ ಹೆಸರು ಹೊನ್ನೇಗೌಡ ಎಂದರೆ ಬೇರೆ ವ್ಯಕ್ತಿಯ ಹೆಸರು ಎಂದರೆ ಸರಿಯಲ್ಲ. ನಿಪಿ.1 ರಿಂದ 7 ರ ಪಹಣಿಗಳಲ್ಲಿ ಖಾಲಂ ನಂ. 12(2) ರಲ್ಲಿ ವ್ಯವಸಾಯಗಾರರ ಎಂಬ ಹೆಸರಿನಲ್ಲಿ ಹೊನ್ನೇಗೌಡ ಎಂದು ನಮೂದು ಇದ್ದು ಅದರಲ್ಲಿ ಎಲ್ಲಿಯೂ ಸಹ ಎಷ್ಟು ಎಕರೆ ಅಥವಾ ಗುಂಟೆಯಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಪಹಣಿಗಳಲ್ಲಿ ಹೊಸೂರಯ್ಯ ಬಿನ್ ಲೇ ತಿಮ್ಮಯ್ಯ ಎಂಬುವವರು 1 ಎಕರೆ 21 ಗುಂಟೆಯಲ್ಲಿ ಸ್ವಾಧೀನಾನುಭವದಲ್ಲಿ ನಮೂದಿಸಲಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಹಣಿಗಳಲ್ಲಿ ಖಾಲಂ ನಂ.12(2) ರಲ್ಲಿ ನನ್ನ ತಾತನ ಹೆಸರು ಹೊನ್ನೇಗೌಡ ಎಂದು ಸೃಷ್ಟಿಸಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು ಸಮಯವಾಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**
**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**